

# ನಮ್ಮದೇ ಕಥೆ–ವ್ಯಥೆಯನ್ನು ಮಕ್ಕಳ ಮನಸಿಗೆ ದಾಟಿಸುತ್ತ...

**ಹೊಟ್ಟೆಪಾಡಿಗೆ ಪುಟ್ಟ ಇಸ್ತ್ರಿ ಅಂಗಡಿ ನೆಚ್ಚಿಕೊಂಡಿರುವ ಜಯಪ್ರಕಾಶ್ ಎಕ್ಕೂರ್, ಪ್ರವೃತ್ತಿಯಿಂದ ಮೇಷ್ಟು. ಪರಿಸರದ ವ್ಯಥೆಯನ್ನು ಕಥೆಗಳ ಮೂಲಕ ಮಕ್ಕಳಿಗೆ ದಾಟಿಸುತ್ತಿರುವ ಅವರು, ಎಳೆಯರನ್ನು 'ಪರಿಸರ ಯೋಧ'ರಾಗಿಸಲು ಪ್ರಯತ್ನಿಸುತ್ತಿದ್ದಾರೆ.**

■ ಸಂಧ್ಯಾ ಹೆಗಡೆ

ದೊಡ್ಡವರಿಗೂ ಅನ್ವಯಿಸುವ ಮಕ್ಕಳ ಕಥೆಯಿದು:

'ಬೆಟ್ಟದಂಚಿನಲ್ಲೊಂದು ಪುಟ್ಟ ಊರು. ಆ ಊರಿನ ಮೂರು ದಾರಿ ಸೇರುವಲ್ಲಿ ಅಜ್ಜಿಯೊಬ್ಬಳು ದಿನವೂ ಹಣ್ಣು ಮಾರುತ್ತಿದ್ದಳು. ಒಂದು ಮಾವಿನ ಹಣ್ಣಿಗೆ ಐದು ರೂಪಾಯಿ, ಎರಡು ಹಣ್ಣಿಗೆ ಹತ್ತು ರೂಪಾಯಿ, ಮೂರು ಹಣ್ಣು ಖರೀದಿಸಿದರೆ ಉಚಿತ. ಬೆಳಿಗ್ಗೆ 9 ಗಂಟೆಗೆ ಅಜ್ಜಿ ಹಣ್ಣಿನ ಬುಟ್ಟಿಯೊಂದಿಗೆ ಬಂದರೆ, 10 ಗಂಟೆಯಾಗುವಷ್ಟರಲ್ಲಿ ಎಲ್ಲ ಹಣ್ಣುಗಳೂ ಖಾಲಿ! ಎಲ್ಲ ಹಣ್ಣುಗಳು ಇಷ್ಟು ಬೇಗ ಹೇಗೆ ಖಾಲಿಯಾದವು ಹೇಳಿ?'

ಕಥೆಗಾರನ ಪ್ರಶ್ನೆಗೆ ಮಕ್ಕಳ ಸರಳ ಉತ್ತರ: 'ಎಲ್ಲರೂ ಮೂರು ಹಣ್ಣು ಕೊಂಡು ಹೋಗುತ್ತಿದ್ದರು'.

ಕಥೆ ಮುಂದುವರಿಯುತ್ತದೆ.

'ಒಂದು ದಿನ ಒಬ್ಬ ಹುಡುಗ ಬಂದು, ಹತ್ತು ರೂಪಾಯಿ ಕೊಟ್ಟು ಒಂದು ಮಾವಿನ ಹಣ್ಣನ್ನು ಖರೀದಿಸಿದ. 'ಯಾಕೆ ಮಗು ಒಂದೇ ಹಣ್ಣು' ಎಂದು ಅಜ್ಜಿ ಅಚ್ಚರಿಯಿಂದ ಪ್ರಶ್ನಿಸಿದಳು. 'ಉಚಿತವಾಗಿ ಪಡೆಯುವುದು ಉಚಿತವಲ್ಲ, ನಾವು ಪಡೆಯುವಾಗ ಏನನ್ನಾದರೂ ಕೊಡಬೇಕಲ್ಲವೇ' ಎಂದು ಆ ಹುಡುಗ ಕಿರುದನಿಯಲ್ಲಿ ಅಜ್ಜಿಯೆದುರು ಗುನುಗಿದ. ಅಜ್ಜಿಯ ಕಣ್ಣಿನಲ್ಲಿ ಮಿಂಚು. ಪುಳಕಗೊಂಡ ಅಜ್ಜಿ, 'ನಾನು ಇಂಥ ದಿನಗಳಿಗೇ ಕಾಯುತ್ತಿದ್ದೆ' ಎನ್ನುತ್ತ ಬಾಲಕನ ಕೊಂಡಾಡಿ, ಎಲ್ಲರಿಗೂ ದೂರದಲ್ಲಿರುವ ಬೆಟ್ಟವನ್ನು ಅಜ್ಜಿ ತೋರಿಸಿದಳು.

'ನೋಡಿ ಮಕ್ಕಳೇ, ಅಲ್ಲಿನ ಗಿಡ–ಮರಗಳೆಲ್ಲ ಕರಗಿವೆ, ಬೆಟ್ಟ ಬೋಳಾಗಿ ಕಾಣುತ್ತಿದೆ. ಯಾಕೆ ಹೀಗಾಯ್ತು? ನಾವು ಪ್ರಕೃತಿಯಿಂದ ಪಡೆಯುವುದು ಮಾತ್ರ, ಹಿಂದಿರುಗಿ ಕೊಡುವ ಬಗ್ಗೆ ಯೋಚಿಸುತ್ತಿಲ್ಲ, ಅದರ ಪರಿಣಾಮವೇ ಈ



ಜಯಪ್ರಕಾಶ್ ಎಕ್ಕೂರ್